> ಕಳೆದ ಇಪ್ಪತ್ತೆರಡು ವರ್ಷಗಳಿಂದ ನಾವು ಭತ್ತದ ಕೃಷಿಯನ್ನು ಸಾವಯವ ರೀತಿಯಲ್ಲಿ ಮಾಡುತ್ತಿದ್ದೇವೆ. ಒಂದು ವರ್ಷವೂ ಅಕ್ಕಿಯನ್ನು ಅಂಗಡಿಯಿಂದ ತರಬೇಕಾಗಿ ಬರಲಿಲ್ಲ. ಹೆಚ್ಚುವರಿ ಆಗಿರುವ ಭತ್ತವನ್ನು ಮಾರುವುದಕ್ಕಿಂತ ಅಕ್ಕಿಯನ್ನಾಗಿ ಮಾಡಿ ಮಾರಾಟ ಮಾಡಿದರೆ ಹೆಚ್ಚಿನ ಬೆಲೆ ಲಭಿಸುತ್ತದೆ. ಕೃಷಿಕರ ಒಕ್ಕೂಟಗಳಿದ್ದಾಗ ರೈತರ ಉತ್ಪನ್ನಗಳಿಗೆ ಒಳ್ಳೆಯ ಬೆಲೆ ದಕ್ಕಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.
>
> **-ಶೈಲಜಾ ಭಟ್,** ಕುಂಜತ್ತೋಡಿ, ಕೃಷಿಕರು



ರಾಜಗೋಪಾಲ

ಕಡಿಮೆಯಾಗುತ್ತಿದ್ದರೂ, ಉತ್ಸಾಹಿ ಕೃಷಿಕರು ಹೊಸ ಹೊಸ ಸವಾಲುಗಳನ್ನು ಸ್ವೀಕರಿಸುತ್ತಿದ್ದಾರೆ. ಭತ್ತದ ಕೃಷಿಯನ್ನು ಮುಂದುವರೆಸಿದ್ದಾರೆ. ಅದಕ್ಕೆ ಹೊಸ ರೀತಿಯ ವರ್ಚಸ್ಸು ತಂದುಕೊಡುವ ಕಾಯಕದಲ್ಲಿ ತೊಡಗಿಕೊಂಡಿದ್ದಾರೆ.

1986ರಿಂದ 2011ರ ಅವಧಿಯಲ್ಲಿ 'ಕರ್ನಾಟಕ ಗೇರು ಅಭಿವೃದ್ಧಿ ನಿಗಮ'ವು ಕರ್ನಾಟಕದ ಕರಾವಳಿಯ ಮೂರು ಜಿಲ್ಲೆಗಳು ಮತ್ತು ಕಾಸರಗೋಡಿನ ಗಡಿ ಪ್ರದೇಶದ ಗ್ರಾಮಗಳಲ್ಲಿ ಗೇರು ಬೀಜ ಇಳುವರಿಗೆ ತೊಂದರೆಯಾಗುತ್ತಿದ್ದ ಟೀಸೊಳ್ಳೆಗಳನ್ನು ನಾಶಮಾಡಲು ನಿರಂತರವಾಗಿ ಎಂಡೊಸಲ್ಫಾನ್ ಮತ್ತು ಇತರ ಕ್ರಿಮಿನಾಶಕಗಳನ್ನು ಸಿಂಪಡಿಸಿತ್ತು. ಇದರಿಂದಾಗಿ ಸ್ಥಳೀಯ ಜನರಿಗೆ ಅನಾರೋಗ್ಯ ಸಮಸ್ಯೆಗಳು ಸೃಷ್ಟಿಯಾಗಿದ್ದವು. ಮಣ್ಣಿನಲ್ಲಿ ವಿಷದ ಅಂಶ ಸೇರಿಕೊಂಡು ಕೃಷಿಗೆ ತೊಂದರೆ ಉಂಟಾಗಿತ್ತು. ಅನೇಕರು ಅಂಗವೈಕಲ್ಯಕ್ಕೆ ತುತ್ತಾಗಿ ಜೀವನವನ್ನೇ ಕಳೆದುಕೊಳ್ಳಬೇಕಾಯಿತು. ಕಾಸರಗೋಡಿನ ಬೆಳ್ಳೂರು, ನೆಟ್ಟಣಿಗೆ, ಏತಡ್ಕ, ಪಡ್ರೆ, ವಾಣಿನಗರ, ಬೆಳೇರಿ ಮುಂತಾದ ಊರುಗಳಲ್ಲಿಯೂ ಈ ವಿಷಕಾರಿ ಕೀಟನಾಶಕ ಸಿಂಪಡಿಸಲಾಗಿತ್ತು. ಇದೇ ಊರುಗಳಲ್ಲಿ ಸುಮಾರು ಒಂದು ದಶಕದ ಅವಧಿಯಲ್ಲಿ ಕೃಷಿಯ ವಿಧಾನಗಳು ಬದಲಾಗಿವೆ. ಬೆಳೆ ಬೆಳೆಯುವ ಸ್ವರೂಪ ಬದಲಾಗಿದೆ. ವಿಷವನ್ನು ಪ್ರಕೃತಿ ಮಾತೆಯು ಹೀರಿಕೊಂಡು ಮತ್ತೆ ಜನರಿಗೆ ಶುದ್ಧ ನೀರುಗಾಳಿಯನ್ನು ಒದಗಿಸುತ್ತಿದ್ದಾಳೆ. ಆಕೆಯ ಕೃಪೆಯಿಂದಲೇ ಎಂಬಂತೆ, ಬೆಳ್ಳೂರು ಗ್ರಾಮದಲ್ಲಿ, ಭತ್ತ ಬೆಳೆಯುವ ಕೃಷಿಕರು ಪ್ರಸ್ತುತ ಒಗ್ಗಟ್ಟಾಗಿ ತಾವು ಬೆಳೆದ ಬೆಳೆಗೆ ಮಾರುಕಟ್ಟೆಯನ್ನು ತಾವೇ ಕಂಡುಕೊಳ್ಳಬೇಕು ಎಂಬ ಉತ್ಸಾಹದಿಂದ ಕೆಲಸ ಮಾಡುತ್ತಿದ್ದಾರೆ.

## ಏನಿದು ನೆಟ್ಟಣಿಗೆ ರೈಸ್?

ನೆಟ್ಟಣಿಗೆಯ ನಿವಾಸಿಯೇ ಆದ ಕೈಪಂಗಳ ರಾಜಗೋಪಾಲ ಅವರು ಈ ಹೊಸ ಪ್ರಯತ್ನದ ಬಗ್ಗೆ ವಿವರಿಸುವುದು ಹೀಗೆ: "ಇದೆಲ್ಲ ಆರಂಭವಾಗಿದ್ದು ಕಳೆದ ವರ್ಷ. ಊರಿನಲ್ಲಿ ಬೆಳೆದ ಭತ್ತಕ್ಕೆ ಹೆಚ್ಚಿನ ಬೆಲೆ ದೊರೆಯದೇ ಇದ್ದಾಗ ರೈತರು ಸಹಜವಾಗಿಯೇ ಕಂಗಾಲಾಗುತ್ತಾರೆ. ಮತ್ತೆ ಬೆಳೆ ಬೆಳೆಯಲು ಹಿಂದೇಟು ಹಾಕುತ್ತಾರೆ. ಆದ್ದರಿಂದ ಇಲ್ಲಿ ಬೆಳೆದ ಅಕ್ಕಿಯನ್ನು ನೇರವಾಗಿ ಗ್ರಾಹಕರಿಗೆ ಮಾರುವ ಪ್ರಯತ್ನವನ್ನು ಮಾಡಬಹುದೇ ಎಂಬ ಆಲೋಚನೆಯೊಂದು ಮೂಡಿತು. ರೈತರು ನೇರವಾಗಿ ಗ್ರಾಹಕರನ್ನು ಕಂಡುಕೊಂಡರೆ ತುಸು ಹೆಚ್ಚು ಲಾಭ ಬರಬಹುದು ಎಂಬ ನಿರೀಕ್ಷೆ ಮೂಡಿತು. ಅದೇ ಸಂದರ್ಭದಲ್ಲಿ ಸ್ಥಳೀಯವಾಗಿ ಬೆಳೆದ ಅಕ್ಕಿಗೆ ಈ ಊರಿನ ಬ್ರಾಂಡ್ ಹೆಸರನ್ನಿಟ್ಟರೆ ಗ್ರಾಹಕರನ್ನು ಬೇಗನೇ ತಲುಪಬಹುದು ಎಂಬ ಅನಿಸಿಕೆಯೂ ವ್ಯಕ್ತವಾಯಿತು. ಆದ್ದರಿಂದ ಸುಗ್ಗಿ ಬೆಳೆ ಕೊಯ್ಲು ಆದಾಗ ದೊರೆತ ಭತ್ತದ ಇಳುವರಿಯನ್ನು ಮಿಲ್‌ಗೆ ಕೊಟ್ಟು ಅಕ್ಕಿ ಮಾಡಿ, 'ನೆಟ್ಟಣಿಗೆ ರೈಸ್' ಬ್ರಾಂಡ್ ಎಂಬ ಹೆಸರಿನಲ್ಲಿಯೇ ಮಾರಾಟ ಮಾಡಿದೆವು. ಈ ಮೊದಲ ಪ್ರಯತ್ನದಲ್ಲಿ ರೈತರಿಂದ ಅಕ್ಕಿಯನ್ನು ನೇರವಾಗಿ ಗ್ರಾಹಕರಿಗೆ ತಲುಪಿಸಲಾಯಿತು. ಮಾರಾಟಗಾರರು ಮಧ್ಯವರ್ತಿಯಾಗಿ ನಿಂತು ಲಾಭಾಂಶ ತೆಗೆದುಕೊಳ್ಳಲಿಲ್ಲ.

ಕಳೆದ ಬಾರಿ ಬೆಳೆದ ಬೆಳೆಯಲ್ಲಿ ಸುಮಾರು 20 ಟನ್ ನೆಟ್ಟಣಿಗೆ ಬ್ರಾಂಡ್ ಕುಚ್ಚಲು ಕಜೆ ಅಕ್ಕಿ ಉತ್ಪಾದಿಸಲಾಗಿದೆ. ಪ್ರಸ್ತುತ ಕೆ.ಜಿ.ಗೆ 55 ರೂಪಾಯಿಯಂತೆ ನಿಗದಿ ಮಾಡಿ ರೈತರಿಂದ ನೇರವಾಗಿ ಗ್ರಾಹಕರಿಗೆ ನೀಡಲಾಗುತ್ತಿದೆ. ಸದ್ಯಕ್ಕೆ ಯಾವುದೇ ಮಧ್ಯವರ್ತಿ ಲಾಭದ ಬಗ್ಗೆ ನಿಶ್ಚಯ ಮಾಡಿಲ್ಲ. ಹಾಗಾಗಿ ಮೊದಲ ಪ್ರಯತ್ನದಲ್ಲಿ ನಮಗೆ ಯಶಸ್ಸು ದೊರೆತಿದೆ ಎಂದೇ ಹೇಳಬೇಕು. ಬೆಳ್ಳೂರು ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಜನರಿಗೆ ಉಣ್ಣಲು ಅಂದಾಜು ವರ್ಷಕ್ಕೆ ಸುಮಾರು 300 ಟನ್ ಅಕ್ಕಿಯ ಅಗತ್ಯವಿದೆ. ಆದರೆ ನೆಟ್ಟಣಿಗೆ ಕುಚ್ಚಲಕ್ಕಿ ಕೇವಲ 30 ಟನ್ ಉತ್ಪಾದನೆ ಆಗಿದೆ. ಬೇಡಿಕೆಗೆ ಹೋಲಿಸಿದರೆ, ಶೇ.10ರಷ್ಟು ಉತ್ಪಾದನೆ ಆಗಿದೆ. ಕಾಸರಗೋಡಿನ ಜನರು, ದಕ್ಷಿಣ ಕನ್ನಡ ಜಿಲ್ಲೆಯಿಂದ ಹೊರಗೆ ಇರುವವರು, ಬೆಂಗಳೂರಿಗೆ ತೆರಳಿದವರು ಕೂಡ ಈ ಅಕ್ಕಿಯನ್ನು ಕೇಳಿ ಖರೀದಿಸಿದ್ದುಂಟು. ಆದ್ದರಿಂದ ಹೊಸ ಪ್ರಯತ್ನಕ್ಕೆ ಮುಂದೆಯೂ ಯಶಸ್ಸು ಸಿಗಬಹುದು ಎಂಬ ನಿರೀಕ್ಷೆ ಇದೆ" ಎನ್ನುವುದು ಮಾರುಕಟ್ಟೆ ಮತ್ತು ಬೇಡಿಕೆಯ ಬಗ್ಗೆ ಜ್ಞಾನ ಇರುವ ರಾಜಗೋಪಾಲ ಅವರ ಅನಿಸಿಕೆ.

ನೆಟ್ಟಣಿಗೆಯ ಮಣಿಭಟ್, ಜಯ ಕುಮಾರ್,


